ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಈ ತರಬೇತಿ ಕೇಂದ್ರದಲ್ಲಿ ಎಷ್ಟು ಜನರಿಗೆ ಕೆಲಸ ಸಿಗುತ್ತದೆ. ಮತ್ತು ಈ ಕಾರ್ಯಾಗಾರದಿಂದ ಎಷ್ಟು ಜನರಿಗೆ ಉಪಕಾರವಾಗುತ್ತದೆ, ೩೮೦ ವಾಸದ ಮನೆಗಳನ್ನು ಏನು ಮಾಡಲಾಗಿದೆ.

ಶ್ರೀ ಎಂ. ರಘುಪತಿ.—೩೮೦ ವಾಸದ ಮನೆಯ ಪೈಕಿ ೩೬೪ ಮನೆಗಳನ್ನು ಆಗಲೇ ಅವರಿಗೆ ಕೊಟ್ಟಿದ್ದೇವೆ. ಯಾರು ಅಲ್ಲಿ ವಾಸ ಮಾಡಬೇಕಾಗಿರುತ್ತದೋ ಅವರಿಗೆ ಹಕ್ಕುಪತ್ರಗಳನ್ನು ಕೊಟ್ಟಿದ್ದೇವೆ. ಇನ್ನು ೧೪ ಜನಗಳಿಗೆ ಹಕ್ಕು ಪತ್ರಗಳನ್ನು ಕೊಟ್ಟಿದ್ದೇವೆ ಮತ್ತು ಆ ಮನೆಗಳನ್ನು ಉಪಯೋಗಿಸಬೇಕೆಂದು ಕೂಡ ಹೇಳಿದ್ದೇವೆ. ಎಷ್ಟು ಜನ ಲಾಭ ಪಡೆಯುತ್ತಾರೆ ಎಂಬ ಬಗ್ಗೆ ವಿವರವನ್ನು ಕೇಳಿದ್ದಾರೆ, ಅದರ ಅಂಕಿ ಅಂಶ ನನ್ನ ಹತ್ತಿರ ಇಲ್ಲ ಕಳಿಸಿ ಕೊಡುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ.—ರಾಜ್ಯ ಕರಕುಶಲ ನಿಗಮ ಲಾಭದಲ್ಲಿದೆಯೋ ಇಲ್ಲವೇ ನಷ್ಟದಲ್ಲಿದೆಯೋ ?

ಶ್ರೀ ಎಂ. ರಘುಪತಿ.—ಇತ್ತೀಚೆಗೆ ಲಾಭ ಗಳಿಸುತ್ತಿದೆ

ರಾಜ್ಯ ರೇಷ್ಮೆ ರಫ್ತು ಬಗ್ಗೆ

೧೪೩೬. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೬-೮೭ ಮತ್ತು ೧೯೮೭-೮೮ನೇ ಸಾಲುಗಳಲ್ಲಿ ಕರ್ನಾಟಕದ ರೇಷ್ಮೆ ವಿನಿಮಯ ಕೇಂದ್ರದ ವ್ಯಾಪಾರದ ಒಟ್ಟು ವೆಚ್ಚ ?

ಆ) ರಾಜ್ಯ ಸರ್ಕಾರದ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸ್ಪರ್ಧಿಸುತ್ತಿದೆಯೆ ?

ಇ) ಕರ್ನಾಟಕದಿಂದ ಆಗುವ ರೇಷ್ಮೆ ರಫ್ತಿನಿಂದ ಕರ್ನಾಟಕಕ್ಕೆ ಮತ್ತು ಇಂಡಿಯಾಕ್ಕೆ ಪ್ರಾಪ್ತವಾದ ರಫ್ತುಗಳಿಗೆ ಎಷ್ಟು ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ರೇಷ್ಮೆ ಸಚಿವರು).—

ಅ) ೧೯೮೬-೮೭ ಮತ್ತು ೧೯೮೭-೮೮ನೇ ಸಾಲುಗಳಲ್ಲಿ ಕರ್ನಾಟಕ ರೇಷ್ಮೆ ವಿನಿಮಯ ಕೇಂದ್ರದ ವ್ಯಾಪಾರದ ಒಟ್ಟುವೆಚ್ಚವನ್ನು ಕೆಳಗೆ ನಮೂದಿಸಲಾಗಿದೆ

ವರ್ಷ	ಪರಿಮಾಣ (ಮೆ. ಟನ್ನುಗಳಲ್ಲಿ	ಮೌಲ್ಯ (ಕೋಟಿ ರೂಪಾಯಿಗಳಲ್ಲಿ)
೧೯೮೬-೮೭	೨೮೮೮	೧೨೯.೩೭
೧೯೮೭-೮೮	೨೯೮೩	೧೫೮.೩೯

ಆ) ಹೌದು, ರೇಷ್ಮೆ ಜವಳಿಗೆ ಸಂಬಂಧಿಸಿದಂತೆ ಸ್ಪರ್ಧಿಸುತ್ತಿದೆ.

ಇ) ಕರ್ನಾಟಕದಿಂದ ಆಗುವ ರೇಷ್ಮೆ ಜವಳಿಯ ರಫ್ತಿನಿಂದ ಕರ್ನಾಟಕ ಮತ್ತು ಇಂಡಿಯಾಕ್ಕೆ ಪ್ರಾಪ್ತವಾದ ರಫ್ತುಗಳಿಗೆ ಹಣದ ವಿವರಗಳನ್ನು ಈ ಕೆಳಗೆ ಕೊಡಲಾಗಿದೆ.

(ಕೋಟಿ ರೂ.ಗಳಲ್ಲಿ)

ವರ್ಷ	ಇಂಡಿಯಾ	ಕರ್ನಾಟಕ
೧೯೮೬-೮೭	೨೧೧.೬೯	೨೪.೯೪
೧೯೮೭-೮೮	೨೫೪.೯೬	೩೫.೦೨

ಶ್ರೀ ಎ. ಲಕ್ಷ್ಮೀಸಾಗರ್ —ಇಲ್ಲಿ "ಆ" ಪ್ರಶ್ನೆಗೆ ಸ್ವಲ್ಪ ಉತ್ತರವನ್ನು ಕೊಂಡುಕೊಳ್ಳಬೇಕು "ರೇಷ್ಮೆ ಜವಳಿಗೆ ಸಂಬಂಧಿಸಿದಂತೆ ಬಾಸಗ ಜಾಗದಲ್ಲಿ ಸರ್ಕಾರದ ಮೂಲಕ ಸ್ಪರ್ಧಿಸುತ್ತಿದೆ. ..ಬಾಸಗ ರೇಷ್ಮೆ ಜವಳಿಯ ಮಾರಾಟದ ಸ್ಪರ್ಧಿಸುತ್ತಿದೆ ಎಂದು ಸೇರಿಸಿಕೊಳ್ಳಬೇಕು."

ಶ್ರೀ ಆರ್. ವೆಂಟರಾಮಯ್ಯ.—ಸನ್ಮಾನ್ಯ ಅಧ್ಯಕ್ಷರೇ ನಿಜವಾಗಿಯೂ ಕೂಡಾ ಈ ಪ್ರಗತಿ ಶ್ಲಾಘನೀಯವಾಗಿದೆ. ಅದಕ್ಕಾಗಿ ಅವರಿಗೆ ನಾವು ವಂದನೆಗಳನ್ನು ಅರ್ಪಿಸಬೇಕು. ಆದರೆ ಹೋದ ಸಾರಿ ೧೯೮೬-೮೭ರಿಂದ ಎಂಪೇರ್ ಮಾಡಿದರೆ ೮೭-೮೮ರಲ್ಲಿ ಮಿಟ್ಕಿಕ್ ಟನ್ ಮಾತ್ರ ಜಾಸ್ತಿಯಾಗಿದೆ. ಇದು ಸ್ವಲ್ಪ ಬಿದಿಮೆ ಎಂದು ನನ್ನ ಬಿಡಿಯ ವಿನಿಸಿಕೆ. ಜೊತೆಗೆ ಭಾರತ ಸರ್ಕಾರಕ್ಕೆ ೨೦೧ ಕೋಟಿ ರೂಪಾಯಿ. ತನಾಟಿಕ ಸರ್ಕಾರಕ್ಕೆ ೪೪ ಕೋಟಿ ರೂಪಾಯಿ ಅದೇ ರಿಂದ ೮೭-೮೮ರ ಭಾರತ ಸರ್ಕಾರಕ್ಕೆ ೨೫೪ ಮತ್ತು ಕರ್ನಾಟಕಕ್ಕೆ ೭೫ ಇದು ಬಿದಿಮೆ ಪ್ರಮಾಣ. ಇದು ಏತಕ್ಕೆ ಈ ರೀತಿ ಆಯಿತು ? ಇನ್ನು ಎರಡೇನಿದು...

ಶ್ರೀ ಎ. ಲಕ್ಷ್ಮೀಸಾಗರ್. —ನನ್ನ ಮಾಲಿಗೆ ಬರುವುದು ಅಷ್ಟೇ.

ಶ್ರೀ ಆರ್. ವೆಂಟರಾಮಯ್ಯ.—ರೇಷ್ಮೆ ಮಾರಾಟ್ಟಿಯಲ್ಲಿ ಅಲ್ಲಿ ರೈತರು ಬೆಳೆದ ರೇಷ್ಮೆ ಬೆಳೆಗೆ ಯಾವ ರೀತಿ ಬೆಲೆ ಸಿಗುತ್ತದೆಯೋ ನನಗೆ ಗೊತ್ತಿಲ್ಲ. ನಮ್ಮ ಮಾನ್ಯ ಸ್ಥಳೀತರಾದ ಲಕ್ಷ್ಮೀಸಾಗರ್ ರವರು ಅಲ್ಲಿಗೆ ವಿಸಿಟ್ ಕೊಟ್ಟಿದ್ದಾರೆಯೋ ಏನೋ ಗೊತ್ತಿಲ್ಲ. ಅಲ್ಲಿ ಅನೇಕ ಅಕ್ರಮಗಳು ಜರುಗುತ್ತಿದೆ ಎಂದು ಹೇಳುತ್ತಾರೆ. ಇದನ್ನು ದಯವಿಟ್ಟು ಎನ್‌ಕ್ವೈರಿ ಮಾಡಿಸಬೇಕು. ಅಲ್ಲಿ ಅನೇಕ ಅಧಿಕಾರಿಗಳು ಮೊಸ ಸಮ್ಮಾಯರಂತೆ ವರ್ತಿಸುತ್ತಿದ್ದಾರೆ ಸಿಯ ದೂರುಗಳು ಕೂಡಾ ಇವೆ. ಅವರಿಗೆ ಏರ್ ಕಂಡೀಷನ್ ರೂಮು ಬುಟ್ಟು ಬಕ್ಕಳ ಐಷಾರಾಮಿ ಜೀವನವನ್ನು ಕಡೆಸುತ್ತಿದ್ದಾರೆ ಎಂದು ಹೇಳುತ್ತಾರೆ. ಆದರೆ ಇಲ್ಲಿ ಬಂದಿರುವುದು ಏನೆಂದರೆ ಅವ್ಯವಹಾರ ಕೊಟ್ಟಿರ ರೇಷ್ಮೆಯನ್ನು ಒಳ್ಳೆಯ ರೀತಿಗೆ ಸರಿದ್ದು ಎಂದು ಅವನ್ನು ದೂರುಕೊಟ್ಟಿಗೆ ಬಿಡುತ್ತಾರೆ. ಏನಾರು ಸಂಭಾವನೆ ಕೊಡುವುದಿಲ್ಲವೋ ಅಂಜಾರೆಯು ಕಡಿಮೆ ರೀತಿಯಲ್ಲಿ ಎಂದು ಅವನ್ನು ಕೊನೆಯಲ್ಲಿ ಮಾಡುತ್ತಾರೆ. ಈ ರೀತಿಯಾಗಿ ಅವ್ಯವಹಾರ ಜಾಸ್ತಿಯಾಗಿದೆ. ಆದ್ದರಿಂದ ಶ್ರೀ ಲಕ್ಷ್ಮೀಸಾಗರ್‌ರವರು ತಾವು ಅದೇ ಕ್ಷೇತ್ರದಲ್ಲಿರುವುದರಿಂದ ಇದರ ಬಗ್ಗೆ ಗಮನ ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ತಿಮ್ಮಕ್ಕರೇ, ಇದು ನನ್ನ ಕ್ಷೇತ್ರದಲ್ಲಿ ಇಲ್ಲ. ನನ್ನ ಕ್ಷೇತ್ರದ ಪಕ್ಕದಲ್ಲಿದೆ. ಬಂದು ಸಲ ಇದನ್ನು ಭೇಟಿ ಕೊಟ್ಟಿದ್ದೇನೆ, ಬಹಳ ವೇಗವನ ಬೇಟಿ. ಸರ್ಧಿಷ್ಣವಾಂಥ ವ್ಯವಹಾರಗಳನ್ನು ಹೇಳಿದರೆ ಅವರ ಮೇಲೆ ಕಠಿಣಾತಿಯಾದ ಕ್ರಮ ತೆಗೆದುಕೊಂಡು ಶಿಕ್ಷೆಯನ್ನು ಕೊಡುವುದಕ್ಕೆ ಹಿಂದೆ ಮುಂದೆ ನೋಡುವುದಿಲ್ಲ. ಈ ರೇಷ್ಮೆ ನೂಲನ್ನು ವಿಂಗಡಣೆ ಮಾಡುವಾಗ ಅದರಲ್ಲಿ ಏರುಪೇರು ಮಾಡುತ್ತಾರೆ. ಹಣ ಕೊಟ್ಟವರಿಗೆ ಹೆಚ್ಚಿನ ಬೆಲೆಯ ರೇಷ್ಮೆ ನೂಲು ಎಂದು ಅಲ್ಲಿ ಅದಕ್ಕೆ ಪಟ್ಟಿಯನ್ನು ಕಟ್ಟುತ್ತಾರೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಎಲ್ಲವನ್ನೂ ಕಂಪ್ಯೂಟರೀಕರಣ ಮಾಡಿದ್ದಾರೆ. ಎಲ್ಲವೂ ಕೂಡ ಕಣ್ಣಿನ ಮುಂದೆ ನಡೆಯುತಕ್ಕಂಥ ವ್ಯವಹಾರ. ಏನಿನಕ್ಕೆ ಅಲ್ಲಿ ಅವಕಾಶ ಇಲ್ಲ ಎಂದು ನನಗೆ ಪ್ರತ್ಯಕ್ಷವಾಗಿ ಕಂಡಂಥ ನ್ಯನ್ಯತೆಯ ಆಧಾರದ ಮೇಲೆ ಹೇಳುತ್ತಿದ್ದೇನೆ. ಸನ್ಮಾನ್ಯ ವೆಂಕಟರಾಮಯ್ಯನವರು ಅವರೇ ನೇರವಾಗಿ ಅಲ್ಲಿಗೆ ಹೋಗಬಹುದು. ರೇಷ್ಮೆ ನೂಲಿನ ವ್ಯವಹಾರವಾಗಲೀ, ರೇಷ್ಮೆ ಉದ್ಯಮದಲ್ಲಿರತಕ್ಕಂಥವರಾಗಲೀ, ಅವರೂ ಕೂಡ ನನ್ನ ಹಾಗೆ ವಕೀಲರು. ಅದನ್ನು ಅವರು ನೋಡಿಕೊಂಡು ಬರಲಿ. ನೋಡಿ ಕೊಂಡು ಬಂದ ನಂತರ ನ್ಯೂನತೆಗಳೇನಾದರೂ ಇದ್ದರೆ ಅದನ್ನು ಹೇಳಿದರೆ ನಾನೂ ಅವರ ಜೊತೆ ಹೋಗಿ ಅವರಲ್ಲಿರತಕ್ಕಂಥ ಲೋಪ ದೋಷಗಳನ್ನು ಶಿಮ್ಮುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಆರ್. ವೆಂಟರಾಮಯ್ಯ.—ಅಲ್ಲಿ ಬಹಳ ಅನ್ಯಾಯಗಳು ಆಗುತ್ತಿವೆ ಎಂದು ಅಲ್ಲಿಗೆ ರೇಷ್ಮೆ ಯನ್ನು ಸರಬರಾಜು ಮಾಡುವಂತಹವರು ನನಗೆ ಮನವಿಯನ್ನು ಕೊಟ್ಟಿದ್ದರಿಂದ ನಾನು ಈ ಉಪ ಪ್ರಶ್ನೆ ಕೇಳಿದ್ದು. ಅವರು ಸರ್ಕಾರಕ್ಕೂ ಮನವಿ ಕೊಟ್ಟಿದ್ದಾರೆ. ಅಲ್ಲಿನ ಅಧಿಕಾರಿಗಳಿಗೆ ದುಡ್ಡು ಕೊಡದಿದ್ದರೆ ನಾಳೆ ಬಾ ಎಂದು ಹೇಳುತ್ತಾರಂತೆ. ಇದರಿಂದ ಮೈಸೂರು ಹಾಗೂ ಕೋಲಾರದಿಂದ ರೇಷ್ಮೆತಂದವರು ಹೊಸ ತಮ್ಮ ತಮ್ಮ ಊರಿಗೆ ಹೋಗಿ ಬರಬೇಕೆಂದರೆ ೨೦೦-೩೦೦ ರೂಪಾಯಿಗಳಷ್ಟು

ಖರ್ಚಾಗುತ್ತದೆ. ಅಧಿಕಾರಿಗಳಿಗೆ ದುಡ್ಡು ಕೊಟ್ಟರೆ ಜಿನ್ಸಾಗಿ ನೋಡಿಕೊಳ್ಳುತ್ತಾರಂತೆ. ಆದ್ದರಿಂದ ಮಾನ್ಯ ಲಕ್ಷ್ಮೀಸಾಗರ್ ಅವರಲ್ಲಿ ನಾನು ಮನವಿ ಮಾಡಿಕೊಳ್ಳುವುದಿಷ್ಟೆ.....

ಶ್ರೀ ಎ. ಲಕ್ಷ್ಮೀಸಾಗರ್.—ಅಲ್ಲಿ ಈ ರೀತಿ ತೊಂದರೆ ಇದೆ ಎಂದು ಯಾರು ನಿಮಗೆ ದೂರುಗಳನ್ನು ಕೊಡುತ್ತಾರೋ, ಅಂತಹವರನ್ನು ನನ್ನ ಬಳಿ ಕಳುಹಿಸಿಕೊಡಿ. ಅವರು ಹೇಳುವಂತಹ ದೂರಿನ ಆಧಾರದ ಮೇಲೆ ನಾನು ಯಾರ ಮುಲಾಜು ಇಲ್ಲದೆ ತಪ್ಪಿತಸ್ಥರ ಮೇಲೆ ಕ್ರಮ ಕೈಕೊಳ್ಳುತ್ತೇನೆ.

ಶ್ರೀ ಗಂಧದ ಮರದ ಕಳ್ಳ ಸಾಗಾಣಿಕೆ

೧೯೯೦. ಶ್ರೀ ಜಿ. ರಾಮದಾಸ್ (ಹೊಸದುರ್ಗ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಅರಣ್ಯಗಳಿಂದ ಅಕ್ರಮವಾಗಿ ಮರ ಮುಟ್ಟುಗಳ ಸಾಗಾಣಿಕೆಗಳಲ್ಲಿ ಅರಣ್ಯಾಧಿಕಾರಿಗಳಿಗೆ ಹೆಚ್ಚು ನೆರವು ಕಲ್ಪಿಸಲು ಸರ್ಕಾರವು ಉದ್ದೇಶಿಸಿದೆಯೇ ?

ಆ) ೧೯೮೭-೮೮ನೇ ಸಾಲಿನಲ್ಲಿ ರಾಜ್ಯದಲ್ಲಿ ಪತ್ತೆಯಾದ ಶ್ರೀಗಂಧ ಮರದ ಅಕ್ರಮ ಸಾಗಾಣಿಕೆಯಲ್ಲಿ ಪತ್ತೆಯಾದ ಪ್ರಕರಣಗಳೆಷ್ಟು ?

ಇ) ಸಾಗಿದ್ದಲ್ಲಿ ಈ ಅವಧಿಯಲ್ಲಿ ಜಪ್ತಿಮಾಡಿಸಿಕೊಂಡ ಶ್ರೀಗಂಧದ ಪ್ರಮಾಣ ಮತ್ತು ಅದರ ಮೌಲ್ಯವೆಷ್ಟು ?

ಶ್ರೀ ಜಿ.ಎಸ್. ಬಾಗಲಕೋಟಿ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಹೌದು.

ಆ) ೧೯೮೭-೮೮ನೇ ಸಾಲಿನಲ್ಲಿ (ಮಾರ್ಚ್ ಅಂತ್ಯದವರೆವಿಗೆ) ಪತ್ತೆಯಾದ ಪ್ರಕರಣಗಳ ಸಂಖ್ಯೆ ೭೫೩.

ಇ) ೧೯೮೭-೮೮ನೇ ಸಾಲಿನ ಮಾರ್ಚ್ ಅಂತ್ಯದ ವರೆವಿಗೆ ಜಪ್ತಿಮಾಡಿಸಿಕೊಂಡ ಗಂಧದ ಪ್ರಮಾಣ ಕೆ.ಜಿ. ೩,೪೪೨.೬೯೨ ಇದ್ದು ಇದರ ಮೌಲ್ಯ ರೂ. ೨,೦೧,೮೧,೧೫೦-೦೦ ಆಗಿರುತ್ತದೆ.

ಶ್ರೀ ಜಿ. ರಾಮದಾಸ್.—ಈ ಮರಮುಟ್ಟುಗಳ ಕಳ್ಳಸಾಗಾಣಿಕೆಯನ್ನು ತಡೆಗಟ್ಟಲು ಅರಣ್ಯಾಧಿಕಾರಿಗಳಿಗೆ ಸರ್ಕಾರದವರು ಯಾವಯಾವ ನೆರವು ಹಾಗೂ ಸಹಾಯವನ್ನು ಒದಗಿಸಿದೆ ಎಂದು ನಾನು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ ?

ಶ್ರೀ ಸಿ. ರವೀಶ್ ಜಿಗಜಿಣಗಿ.—ಈ ಕಳ್ಳಸಾಗಾಣಿಕೆಯನ್ನು ತಡೆಗಟ್ಟಲು ಸರ್ಕಾರ ಈ ರೀತಿಯ ಕ್ರಮಗಳನ್ನು ಕೈಗೊಂಡಿದೆ. ಅದು ಈ ರೀತಿ ಇದೆ.—

೧) ಕರ್ನಾಟಕ ಅರಣ್ಯ ಕಾಯಿದೆ ೧೯೬೩ರ ಪ್ರಕಾರ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಕಳ್ಳ ಸಾಗಾಣಿಕೆಯಲ್ಲಿ ತೊಡಗಿದ ವಾಹನಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಅಧಿಕಾರ ಹೊಂದಿರುತ್ತಾರೆ.

೨) ೧೮ ಅರಣ್ಯ ಸಂಚಾರಿ ದಳಗಳಿದ್ದು ಅವು ಅವ್ಯಾಹತವಾಗಿ ಅರಣ್ಯ ಗುನೆ ವ್ಯಕರಣಗಳನ್ನು ಪತ್ತೆ ಹೆಚ್ಚಲು, ಅಪರಾಧಿಗಳನ್ನು ಬಿಡಿದು ಕ್ರಮ ಕೈಕೊಳ್ಳಲು ಇನ್ನೂ ೯ ಅರಣ್ಯ ಸಿಬ್ಬಂದಿಗಳೊಂದಿಗೆ ಶ್ರಮಿಸುತ್ತಿದ್ದಾರೆ ಮತ್ತು ಪಹರೆ ನಡೆಸುತ್ತಿದ್ದಾರೆ.

೩) ಅರಣ್ಯ ಸಿಬ್ಬಂದಿಗಳಿಗೆ ಸ್ವಸಂರಕ್ಷಣೆಗಾಗಿ ಆಯುಧಗಳನ್ನು ನೀಡಲಾಗಿದೆ. ತ್ವರಿತ ಕಾರ್ಯಾಚರಣೆಗಾಗಿ ಇಲಾಖೆಯ ಕಾರುಗಳನ್ನು, ಲಾರಿಗಳನ್ನು ಮತ್ತು ಜೀಪುಗಳನ್ನು ನೀಡಲಾಗುತ್ತಿದೆ.